1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 11.08.2026 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 44 ಪಿ. ಡಬ್ಲ್ಯೂ:32

| | |
|---|---|
| ಸಾಕ್ಷಿದಾರರ ಹೆಸರು | ಎಂ ಆರ್ ಸುದರ್ಶನ್ |
| ತಂದೆಯ ಹೆಸರು | ಲೇಟ್ ಎಸ್.ರಾಘವ ಚಾರ್ |
| ವಯಸ್ಸು | 58 ವರ್ಷ |
| ಉದ್ಯೋಗ | ಪಿಎಸ್ಐ, ಬನ್ನೂರು ಪೊಲೀಸ್ ಠಾಣೆ. |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2019 ರಿಂದ 2022 ರವರೆಗೆ ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 24.04.2022 ರಂದು ಮೃತೆ ಶಾಂತಮ್ಮ ನವರು ಮೈಸೂರಿನ ಕಾವೇರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ, ನಾನು ಆಲನಹಳ್ಳಿ ಪೊಲೀಸ್ ಠಾಣೆಗೆ ಹೋಗಿ, ಮಾಹಿತಿಯನ್ನು ಪೊಲೀಸ್ ಇಂಟಿಮೇಷನ್ ನಿಂದ ಪಡೆದೆನು.
3. ದಿಃ 25.04.2022 ರಂದು ಮಧ್ಯಾಹ್ನ 12.35 ಗಂಟೆ ಸಮಯದಲ್ಲಿ ಮೃತೆ ಶಾಂತಮ್ಮ ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿದ್ದಾರೆ ಎಂಬ ಮಾಹಿತಿ ಕಿರುಗಾವಲು ಪೊಲೀಸ್ ಠಾಣೆಗೆ ಬಂತು. ಬಳಿಕ ನಾನು ಚಾಸಾ.46 ರವರ ಜೊತೆ ಕಾವೇರಿ ಆಸ್ಪತ್ರೆ ಮೈಸೂರಿಗೆ ಹೋದೆನು. ಕಾವೇರಿ ಆಸ್ಪತ್ರೆಯಿಂದ ಶವವನ್ನು ಮೈಸೂರಿನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದೆವು. ಚಾಸಾ.46 ರವರು ಆ ದಿನ ಸಂಜೆ 4.00 ರಿಂದ 6.00 ಗಂಟೆ ರವರಗೆ ಶಾಂತಮ್ಮಳ ಮೃತ ಶರೀರದ ಬಾಬ್ತು ಶವ ಪಂಚನಾಮೆಯನ್ನು ಮಾಡಿದ್ದಾರೆ. ಅವರು ಶವ ತನಿಖೆಯನ್ನು ಮಾಡಿ ಮಹಜರನ್ನು ನನಗೆ ಉಕ್ತಲೇಖನ ಕೊಟ್ಟಾಗ ನಾನೇ ಅದನ್ನು ಬರೆದಿದ್ದೇನೆ. ಸಾಕ್ಷಿಯು ನಿಪಿ.16 ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದರಲ್ಲಿ

ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು.

4. ಕಾವೇರಿ ಆಸ್ಪತ್ರೆಯಿಂದ ಆಲನಹಳ್ಳಿ ಪೊಲೀಸ್ ಠಾಣೆ ಯವರು ಪಡೆದಿದ್ದ out patient police intimation ಕೂಡ ನಾನು ಪಡೆದಿದ್ದೆನು. ಅದನ್ನು ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಪಿ.64 ಎಂದು, ಸಾಕ್ಷಿಯ ಸಹಿಯನ್ನು ನಿಪಿ.64(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಕಾವೇರಿ ಆಸ್ಪತ್ರೆಯವರು ನೀಡಿದ ಡೆತ್ ಇಂಟಿಮೇಷನ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.65 ಎಂದು, ಸಾಕ್ಷಿಯ ಸಹಿಯನ್ನು ನಿಪಿ.65(ಎ) ಎಂದು ಗುರುತಿಸಲಾಯಿತು.

5. ಶವ ತನಿಖೆಯ ಕಾಲಕ್ಕೆ ಚಾಸಾ. 46 ರವರು ಹೇಳಿದ ರೀತಿ ನಾನು ಫೋಟೋಗಳನ್ನು ಕೂಡ ನಾನು ತೆಗೆದಿದ್ದೇನೆ. ಸಾಕ್ಷಿಯು 2 ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ನಿಪಿ. 66 ಮತ್ತು 67 ಎಂದು ಗುರುತಿಸಲಾಯಿತು.

6. ನಾನು ನಿಪಿ.16 ಮಹಜರ್ ಕಾಲಕ್ಕೆ ಫೋಟೋ ತೆಗೆದ ಬಗ್ಗೆ ಕಲಂ.65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ.68 ಎಂದು, ಸಾಕ್ಷಿಯ ಸಹಿಯನ್ನು ನಿಪಿ.68(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್.ಕೆ.ಎಸ್ ವಕೀಲರಿಂದ ಃ**

7. ನಾನು ದಿಃ 24.04.2022 ಮತ್ತು 25.04.2022 ಮತ್ತು 26.04.2022 ರಂದು ಆಲನಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದೇನೆ. ನಾನು ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಮಯ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ. ಶವತನಿಖೆ ಕಾಲಕ್ಕೆ ಪಂಚಾಯಿತಿದಾರರನ್ನು ಚಾಸಾ. 46 ರವರು ಬರಮಾಡಿಕೊಂಡರು. ನನಗೆ ನಿಪಿ.16 ಶವ ಮಹಜರನ್ನು ಉಕ್ತಲೇಖನ ಕೊಡುವಾಗ ಪಂಚಾಯಿತಿದಾರರು ಕೂಡ ಹಾಜರಿದ್ದರು. ಆ ಪಂಚಾಯಿತಿದಾರರ ಹೆಸರು ಕಾವ್ಯಶ್ರೀ, ಆದಿಶೇಷ ಮತ್ತು ಹೆಚ್ ಆರ್ ಕೇಶವಮೂರ್ತಿ. ಫೋಟೋ ತೆಗೆದು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ನೀಡಿದ್ದೇನೆ. ನಿಪಿ.68 ರಲ್ಲಿ ಫೋಟೋವನ್ನು ಪ್ರಿಂಟ್ ಹಾಕಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಯಾವುದೇ ಫೋಟೋವನ್ನು

ಮೊಬೈಲ್ ನಲ್ಲಿ ತೆಗೆದಿಲ್ಲ, ಅದನ್ನು ಪ್ರಿಂಟ್ ಹಾಕಿಸಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ಮಹಜರಿಗೆ ತನಿಖಾಧಿಕಾರಿಗಳು ಖಾಲಿ ಹಾಳೆಗೆ ಸಹಿ ಪಡೆದರು ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಪಂಚರಿಗೆ ಯಾವಾಗ ನೋಟಿಸು ನೀಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.